ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE: 29/8/2020

# ವಿರಾಮವಿಲ್ಲದಂತೆ ನಡೆಯಲಿದೆ ಸಂಸತ್ ಅಧಿವೇಶನ

## ಮುಂದಿನ ತಿಂಗಳ 14ರಿಂದ ಆರಂಭವಾಗಿ ಅ. 1ರವರೆಗೆ ನಡೆಯಲಿವೆ ಉಭಯ ಸದನಗಳ ಒಟ್ಟು 18 ಕಲಾಪ

**ನವದೆಹಲಿ:** ಕೊರೊನಾ ಆತಂಕದ ಹಿನ್ನೆಲೆಯಲ್ಲಿ ಮುಂದೂಡಲ್ಪಟ್ಟಿದ್ದ ಸಂಸತ್‌ನ ಮುಂಗಾರು ಅಧಿವೇಶನಕ್ಕೆ ಕೊನೆಗೂ ಮುಹೂರ್ತ ಕೂಡಿಬಂದಿದೆ. ಸೆ.14ರಂದು ಆರಂಭವಾಗಲಿರುವ ಅಧಿವೇಶನ ಒಂದು ದಿನವೂ ವಿರಾಮ ತೆಗೆದುಕೊಳ್ಳದೆ ಅಕ್ಟೋಬರ್ 1ರವರೆಗೆ ನಡೆಯಲಿದೆ.

ರಾಜ್ಯಸಭೆ, ಲೋಕಸಭೆಯ ಒಟ್ಟು 18 ಕಲಾಪಗಳು ನಡೆಯಲಿವೆ. ಪ್ರತಿ ಸದನವೂ ನಿತ್ಯ 4 ಗಂಟೆಗಳ ಕಾಲ ನಡೆಯಲಿದೆ. ರಾಜ್ಯಸಭೆ ಅಧಿವೇಶನ ದಿನದ ಆರಂಭದ 4 ಗಂಟೆ, ಬಳಿಕ ಲೋಕಸಭೆಯ ಕಲಾಪಗಳು 4 ಗಂಟೆ ನಡೆಯಲಿವೆ.

**ನೋ ಬ್ರೇಕ್:** ಕಲಾಪ ಸಂಬಂಧ ಮಾಹಿತಿ ನೀಡಿದ ಸಂಸದೀಯ ವ್ಯವಹಾರಗಳ ಸಚಿವ ಪ್ರಹ್ಲಾದ್ ಜೋಶಿ, 'ಒಟ್ಟು 18 ಕಲಾಪಗಳ ನಡುವೆ ಯಾವುದೇ ವಿರಾಮಗಳು ಇರುವುದಿಲ್ಲ. ವಾರಾಂತ್ಯದ ರಜೆ ನೀಡಿದರೆ ಸಂಸದರು ಬೇರೆ ಸ್ಥಳಗಳಿಗೆ ಪ್ರಯಾಣಿಸುವ ಸಾಧ್ಯತೆ ಇರುತ್ತದೆ. ಇದರಿಂದ ಸೋಂಕಿನ ಅಪಾಯ ಹೆಚ್ಚಾಗಬಹುದು. ಜೊತೆಗೆ ಅ. 1ರ ಆಚೆಗೂ ಅಧಿವೇಶನ ಮುಂದುವರಿಸಬೇಕಾಗುತ್ತದೆ. ಹಾಗಾಗಿ, ಕಲಾಪ ವಿಸ್ತರಿಸುವುದು ಸುರಕ್ಷಿತವಲ್ಲ' ಎಂದರು.



**ಸಂಸತ್‌ನ ಮುಂಗಾರು ಅಧಿವೇಶನವನ್ನು ಸುಗಮವಾಗಿ ನಡೆಸುವುದು ನಮ್ಮ ಆದ್ಯತೆಯಾಗಿದೆ. ಇದಕ್ಕಾಗಿ ಸೂಕ್ತ ವ್ಯವಸ್ಥೆಗಳನ್ನು ಮಾಡಿಕೊಂಡಿದ್ದೇವೆ.**
**- ಓಂ ಬಿರ್ಲಾ, ಲೋಕಸಭೆ ಸ್ಪೀಕರ್**

**11 ಸುಗ್ರೀವಾಜ್ಞೆ:** ಉಭಯ ಸದನಗಳ ಅಂಗೀಕಾರಕ್ಕಾಗಿ ಕೇಂದ್ರ ಸರ್ಕಾರ 11 ಸುಗ್ರೀವಾಜ್ಞೆಗಳನ್ನು ತರಲು ಸಜ್ಜಾಗಿದೆ. ಇವು ಸಂಸದೀಯ ವ್ಯವಹಾರ, ಆರೋಗ್ಯ, ಹಣಕಾಸು, ಕೃಷಿ ಸಚಿವಾಲಯಕ್ಕೆ ಸಂಬಂಧಿಸಿವೆ.

**ಕಾಂಗ್ರೆಸ್ ಸನ್ನದ್ಧ:** ಸರ್ಕಾರ ಪ್ರಕಟಿಸುವ ಸುಗ್ರೀವಾಜ್ಞೆ ಚರ್ಚೆಗೆ ಹಾಗೂ ಆಡಳಿತ ವೈಫಲ್ಯಗಳನ್ನು ಪ್ರಶ್ನಿಸಲು ಪ್ರಮುಖ ವಿಪಕ್ಷ ಕಾಂಗ್ರೆಸ್ ಹಿರಿಯ ನಾಯಕರನ್ನು ಮುಂದೆ ಬಿಟ್ಟಿದೆ. ಪಿ. ಚಿದಂಬರಂ, ದಿಗ್ವಿಜಯ ಸಿಂಗ್, ಜೈರಾಮ್ ರಮೇಶ್, ಅಮರ್ ಸಿಂಗ್, ಗೌರವ್ ಗೊಗೊಯ್ ಅವರನ್ನೊಳಗೊಂಡ 5 ಸದಸ್ಯರ ಸಮಿತಿಯನ್ನು ಕಾಂಗ್ರೆಸ್ ರಚಿಸಿದೆ. ಗಡಿಬಿಕ್ಕಟ್ಟು, ವಲಸೆ ಕಾರ್ಮಿಕರ ಸಮಸ್ಯೆ, ಆರ್ಥಿಕ ಬಿಕ್ಕಟ್ಟು ನಿರ್ವಹಣೆ ಕುರಿತು ಪ್ರಶ್ನಿಸಲು ಕಾಂಗ್ರೆಸ್ ತಂತ್ರ ಹೆಣೆದಿದೆ.

## ಎಲ್ಲಾ ಸಂಸದರಿಗೆ ಕೊರೊನಾ ಟೆಸ್ಟ್ ಕಡ್ಡಾಯ

**ನವದೆಹಲಿ:** ಮುಂಗಾರು ಅಧಿವೇಶನ ಆರಂಭವಾಗುವ 72 ಗಂಟೆಗಳ ಮುಂಚೆ ಎಲ್ಲಾ ಸಂಸದರೂ ಕೊರೊನಾ ಪರೀಕ್ಷೆ ಮಾಡಿಸಿಕೊಳ್ಳಬೇಕು ಎಂದು ಸ್ಪೀಕರ್ ಓಂ ಬಿರ್ಲಾ ಮನವಿ ಮಾಡಿದ್ದಾರೆ.

ಶುಕ್ರವಾರ ಓಂ ಬಿರ್ಲಾ ಅವರು ಆರೋಗ್ಯ ಇಲಾಖೆಯ ಅಧಿಕಾರಿಗಳು, ಐಸಿಎಂಆರ್, ಏಮ್ಸ್, ಡಿಆರ್‌ಡಿಒ ಮತ್ತು ದೆಹಲಿ ಸರ್ಕಾರದ ಅಧಿಕಾರಿಗಳ ಜತೆ ಸುದೀರ್ಘ ಸಭೆ ನಡೆಸಿದರು. ಬಳಿಕ ಮಾತನಾಡಿದ ಓಂ ಬಿರ್ಲಾ ಅವರು ಈ ಮನವಿ ಮಾಡಿದ್ದಾರೆ. ಇದು ಕೇವಲ ಸಂಸದರಿಗಷ್ಟೇ ಅಲ್ಲ, ಅಧಿಕಾರಿಗಳಿಗೂ ಅನ್ವಯವಾಗುತ್ತದೆ ಎಂದಿದ್ದಾರೆ. ಜತೆಗೆ ಸಂಸತ್ ಪ್ರವೇಶಿಸುವ ಪ್ರತಿಯೊಬ್ಬರು, ಅಂದರೆ, ಸಚಿವಾಲಯಗಳ ಅಧಿಕಾರಿಗಳು, ಮಾಧ್ಯಮ ಪ್ರತಿನಿಧಿಗಳು, ಲೋಕಸಭೆ ರಾಜ್ಯಸಭೆ ಕಾರ್ಯಾಲಯಗಳ ಸಿಬ್ಬಂದಿ ಕ... ಗಂಟೆಗಳ ಮುನ್ನ ಕೊರೊನಾ ಪರೀಕ್ಷೆ ಮಾ... ಬೇಕು ಎಂದು ಹೇಳಿದ್ದಾರೆ.

ಅಷ್ಟೇ ಅಲ್ಲ, ಸಂಸತ್ ಅಧಿವೇಶನ ನ... ಸಂದರ್ಭದಲ್ಲಿ ರ್‍ಯಾಂಡಮ್ ಕೊರೊನಾ ಟೆ... ಮಾಡಲಾಗುವುದು ಎಂದಿದ್ದಾರೆ. ವ... ಪ್ರಕಾರ, ಸಂಸತ್ ಅಧಿವೇಶನ ಸೆ.14ರಿಂದ ... ವರೆಗೆ ನಡೆಯುವ ಸಾಧ್ಯತೆ ಇದೆ. ಅಲ್ಲದೆ ... ಮತ್ತು ಸಂಜೆ ಎರಡು ಶಿಫ್ಟ್‌ನಲ್ಲಿ ನಡೆ... ಎಂದು ಹೇಳಲಾಗಿದೆ. ಕೊರೊನಾ ಹಿನ್ನೆ... ಇದೇ ಮೊದಲ ಬಾರಿಗೆ ಅಧಿವೇಶನಕ್ಕಾ... ವಾರು ಬದಲಾವಣೆಗಳನ್ನು ಮಾಡಲಾಗಿದೆ.